॥ ಶ್ರೀ ಭೋಗಾಪುರೇಶ ಪ್ರಸನ್ನ ॥

ರಚಿಸಿದವರು : ಶ್ರೀ ಎನ್.ಜಿ. ಭೋಗೇಶಾಚಾರ್ಯ ಅರ್ಚಕರು ನವಲಿ.

ಶ್ರೀಪತಿಗೆ ಇಂದಿರಾಗೆ ಶ್ರೀಮಧ್ವಾದಿ ಗುರುಗಳಿಗೆ ನಮಿಸಿ ।
ಈ ಪದವ ರಚಿಸಲು ನಿರ್ವಿಘ್ನವ ಕರುಣಿಸಲು ಬೇಡುವೆ ॥ ಪ ॥

ಗಣಪತಿಗೆ ನಮಿಸಿ ಶೀಭೋಗಾಪುರೇಶ ಮಹಿಮೆಯ ।
ಅನುನಯದಿ ಪೇಳುವೆ ಕೇಳುವುದು ಸುಜನರಿದನು ॥ ೧ ॥

ಮಾನ್ಯ ನರಸಿಂಹಾಚಾರ್ಯ ಕಾರಟಗಿ ಎಂಬುವರು ಭೋಗಾಪುರೇಶ ।
ನಿನ್ನ ದರ್ಶನಕೆಂದು ಬರುತಿರಲು ಭೋಗಾಪುರೇಶ ॥ ೨ ॥

ಗುಡೂರು ಗ್ರಾಮದ ಬಳಿ ಹಳ್ಳವು ತುಂಬಿ ಹರಿಯುತಿರೆ ಭೋಗಾಪುರೇಶ ।
ಒಡನೆ ನಿನ್ನನ್ನು ನೆನೆದು ಹಳ್ಳದಿ ಧುಮುಕಲು ಭೋಗಾಪುರೇಶ ॥ ೩ ॥

ನಿನ್ನ ಭಕುತ ಪ್ರವಾಹದಿ ಹಾರಿದುದ ನೋಡಿ ಭೋಗಾಪುರೇಶ ।
ಚೆನ್ನಾಗಿ ರಕ್ಷಿಸಿ ದಡಕೆ ತಂದು ಬಿಟ್ಟಿಯೋ ಭೋಗಾಪುರೇಶ ॥ ೪ ॥

ವಾದೀಂದ್ರಾಚಾರ್ಯ ಕಂಪ್ಲಿ ಎಂಬುವರಿಗೆ ಭೋಗಾಪುರೇಶ ।
ಓಡನದಿ ನಿತ್ಯ ಹುಳುವಾಗಿ ಕಾಡುತಿರಲು ಭೋಗಾಪುರೇಶ ॥ ೫ ॥

ಬಂದರು ನಿನ್ನ ಖ್ಯಾತಿಯ ಕೇಳಿ ಭೋಗಾಪುರೇಶ ।
ಚೆಂದದಿ ಎರಡು ವಾರ ನಿನ್ನ ಸೇವಿಸಿದರು ಭೋಗಾಪುರೇಶ ॥ ೬ ॥

ಅನ್ನದಿ ಹುಳುವಾಗುವುದನು ಕರುಣದಿ ಭೋಗಾಪುರೇಶ ।
ಮನ್ನಿಸಿ ನಿಲ್ಲಿಸಿ ಸಲುಹಿದಿ ದಯದಿ ಭೋಗಾಪುರೇಶ ॥ ೭ ॥

ನೀನು ತೋರಿದ ಕರುಣೆಗೆ ಭೋಗಾಪುರೇಶ ।
ಸಾನುರಾಗದಿ ಆಚಾರ್ಯರು ಭೋಗಾಪುರೇಶ ॥ ೮ ॥

ಇಪ್ಪತ್ನಾಲ್ಕು ವರುಷದವರೆಗೆ ಸತತ । ಭೋಗಾಪುರೇಶ ।
ತಪ್ಪದಲೆ ದಿನವೂ ಅನ್ನದಾನ ಮಾಡಿದರು ಭೋಗಾಪುರೇಶ ॥ ೯ ॥

ಉದರಶೂಲೆಗೆ ಆದಾಪುರದುಪ್ಪಾರನು ಭೋಗಾಪುರೇಶ ।
ಹೆದರಿ ಶೂಲೆಗೆ ನಿನಗೆ ಶರಣು ಬಂದನು ಭೋಗಾಪುರೇಶ ॥ ೧೦ ॥

ಹೊಟ್ಟೆಶೂಲೆಯ ತಕ್ಷಣ ನಿಲ್ಲಿಸಿದರೆ ಭೋಗಾಪುರೇಶ ।
ಮುಟ್ಟಿಸುವೆನೆನ್ನ ಶಿರವನು ನಿನ್ನಡಿಗೆಂದನು ಭೋಗಾಪುರೇಶ ॥ ೧೧ ॥

ಅಂದಮಾತನು ಕೇಳಿ ಪರೀಕ್ಷಿಸಲು ಭೋಗಾಪುರೇಶ ।
ಚೆಂದದಿ ಶೂಲೆಯ ನಿಲ್ಲಿಸಿದೆಯೋ ಭೋಗಾಪುರೇಶ ॥ ೧೨ ॥

ಕೊಟ್ಟ ಮಾತಿನಂತೆ ಲವಣಿಯು ಬಂದು । ಭೋಗಾಪುರೇಶ ।
ಇಟ್ಟನು ಕಡಿದು ಶಿರವ ನಿನ್ನಡಿಗಳಿಗೆ ಭೋಗಾಪುರೇಶ ॥ ೧೩ ॥

ನಿನ್ನ ಅಂಘಾರವನಭಿಮಂತ್ರಿಸಿ ಅರ್ಚಕರು ಹಚ್ಚಲು ಭೋಗಾಪುರೇಶ ।
ಮುನ್ನಿನಂದದಿ ಶಿರವು ಹತ್ತಿ ಕೊಂಡಿತಾಗ ಭೋಗಾಪುರೇಶ ॥ ೧೪ ॥

ಲವಣಿಯು ನಿನ್ನ ಮಹಿಮೆಯ ಕೊಂಡಾಡಿದ ಭೋಗಾಪುರೇಶ ।
ಪವಮಾನನೆನ್ನ ಸಲುಹಿದನೆಂದು ಕುಣಿದಾಡಿದ ಭೋಗಾಪುರೇಶ ॥ ೧೫ ॥

ಒಡವೆಗಳಾಸೆಗೆ ಬಂದರು ಕಳ್ಳರು ಭೋಗಾಪುರೇಶ ।
ಬಿಡದೆ ನಿನ್ನನು ಒಡೆದು ಚೂರಾಗಿ ಮಾಡಿದರು ಭೋಗಾಪುರೇಶ ॥ ೧೬ ॥

ಮಡುವಿನೊಳಗೆ ನಿನ್ನನೊಯ್ದು ಹಾಕಲು ಭೋಗಾಪುರೇಶ ।
ಗುಡಿಗೆ ಪೂಜೆಗೆ ಬಂದ ಕೂರ್ಮಾಚಾರ್ಯರಿಗೆ ಭೋಗಾಪುರೇಶ ॥ ೧೭ ॥

ಕನಸಲ್ಲಿ ಬಂದೆನ್ನ ಮಡುವಿನಲ್ಲಿ ಹಾಕಿಹರೆಂದೆ ಭೋಗಾಪುರೇಶ ।
ಪುನಃ ಪ್ರತಿಷ್ಠಾಪಿಸೆಂದು ನುಡಿದೆ ಭೋಗಾಪುರೇಶ ॥ ೧೮ ॥

ಶಾನುಭೋಗರೊಂದಿಗೆ ಅರ್ಚಕರು ಮಡುವಿಗೆ ಬಂದರು ಭೋಗಾಪುರೇಶ ।
ಆನಕದುಂದುಭ್ಯಾದಿವಾದ್ಯಗಳು ಮೊಳಗುತರಲು ಭೋಗಾಪುರೇಶ ॥ ೧೯ ॥

ಜಯಭೋ ಎಂದು ಶಕಲಗಳ್ಹೊತ್ತು ತಂದರು ಭೋಗಾಪುರೇಶ ।
ಭಯನಿವಾರಣನ ಗೋಘೃತಮಧುವಿನಲ್ಲಿಟ್ಟು ಭೋಗಾಪುರೇಶ ॥ ೨೦ ॥

ಮೊದಲಿನಂತೆ ಜೋಡಿಸಿದರು ನಿನ್ನ ಭೋಗಾಪುರೇಶ ।
ಮುದದಿ ಮತ್ತೆ ಕನಸಿನಲಿ ಬಂದು ಹೇಳಿದೆ ಭೋಗಾಪುರೇಶ ॥ ೨೧ ॥

ಬಾಗಿಲು ತೆಗೆಯಿರಿ ಹನ್ನೊಂದು ದಿನಕೆಂದು ಪೇಳಿದೆ ಭೋಗಾಪುರೇಶ ।
ಹಾಗೆ ಮಾಡಲು ಮೊದಲಿನಂತೆ ಆಗುವೆ ಎಂದೆ ಭೋಗಾಪುರೇಶ ॥ ೨೨ ॥

ಬಾಗಿ ನಮಿಸಿಹಸಾದಂದು ಬಾಗಿಲ್ಹಾಕಿದರು ಭೋಗಾಪುರೇಶ ।
ಭಾಗವತಭಾರತಪವಮಾನಹೋಮ ನಡೆಸಿದರು ಭೋಗಾಪುರೇಶ ॥ ೨೩ ॥

ತೈಲಪದಾರ್ಥತೈಲದೀಪ ಇಂದಿನಿಂದ ನಡೆಯದು ಎಂದೆ ಭೋಗಾಪುರೇಶ ।
ಲೋಲಲೋಚನೆಯರಡುಗೆಯೂ ಬರದು ಎಂದೆ ಭೋಗಾಪುರೇಶ ॥ ೨೪ ॥

ಹತ್ತು ದಿನಗಳು ಗತಿಸಿರಲು ಭೋಗಾಪುರೇಶ ।
ಭೃತ್ಯನೊಬ್ಬ ಕೊಡಗಲಿಯಿಂದ ನಿನ್ನ ದರುಶನಕೆ ಬಂದ ಭೋಗಾಪುರೇಶ ॥ ೨೫ ॥

ಪಾದಚಾರಿಯಾಗಿ ಬಂದ ಭಕ್ತಗೆ ಭೋಗಾಪುರೇಶ ।
ಆದ ಘಟನೆಯನರ್ಚಕರು ವಿವರಿಸಿ ಭೋಗಾಪುರೇಶ ॥ ೨೬ ॥

ಇನ್ನೊಂದು ದಿನ ತಡೆಯಿರೆಂದರ್ಚಕರು ನುಡಿಯೆ ಭೋಗಾಪುರೇಶ ।
ನನಗೆ ಇಂದೇ ದರ್ಶನ ಮಾಡಿಸಿರೆಂದು ಹಠ ಮಾಡಲು ಭೋಗಾಪುರೇಶ ॥ ೨೭ ॥

ಹೇಗಾದರಾಗಲಿ ಎಂದು ಅರ್ಚಕರು ಬಂದು ಭೋಗಾಪುರೇಶ ।
ಬಾಗಿಲು ತೆಗೆದಾಗಾ ದೃಶ್ಯ ನೋಡಿ ಬೆರಗಾದರು ಭೋಗಾಪುರೇಶ ॥ ೨೮ ॥

ಒಂದು ದಿನ ಮುಂಚೆ ಬಾಗಿಲು ತೆಗೆದದ್ದಕ್ಕೆ ಭೋಗಾಪುರೇಶ ।
ಹೊಂದಿಕೊಳ್ಳದೆ ಪೂರ್ಣಭಿನ್ನವಾಗಿದ್ದೂ ನೋಡಿ ಭೋಗಾಪುರೇಶ ॥ ೨೯ ॥

ಭಿನ್ನವಾದರೆ ಪೂಜೆ ಬರದೆಂಬುದು ಶಾಸ್ತ್ರವಿದೆಂದು ಭೋಗಾಪುರೇಶ ।
ದೈನ್ಯದಿಂದಿರಲು ಅರ್ಚಕರಾದಿಯಾಗಿ ಎಲ್ಲರೂ ಭೋಗಾಪುರೇಶ ॥ ೩೦ ॥

ಭಿನ್ನನಾದರೂ ನಾನಿದರಲ್ಲಿರುವೆನು ಎಂದೆ ಭೋಗಾಪುರೇಶ ।
ಮುನ್ನಿನಂದದಿ ಪೂಜಿಸಿರಿ ಎಂದ ಎಂದರ್ಚಕಗೆ ನುಡಿದಿ ಭೋಗಾಪುರೇಶ ॥ ೩೧ ॥

ಅಂದಿನಿಂದ ಇಂದಿನವರೆಗೂ ಪೂಜೆಗೊಳ್ಳುತಿಹೆ ಭೋಗಾಪುರೇಶ ।
ಗಂಧವಾಹನ ನಿನ್ನ ಮಹಿಮೆಗೆಣೆಯೆಲ್ಲಿಹುದೋ ಭೋಗಾಪುರೇಶ ॥ ೩೨ ॥

ಸತ್ಯಪರಾಯಣತೀರ್ಥಯತಿಗಳು ಬರಲು ಭೋಗಾಪುರೇಶ ।
ಕ್ಷೇತ್ರಮಹಿಮೆ ತಿಳಿಯದೇ ನಿನ್ನ ನೋಡಿ ಭೋಗಾಪುರೇಶ ॥ ೩೩ ॥

ಭಿನ್ನವಾಗಿಹ ಮೂರ್ತಿ ಪೂಜೆಗನರ್ಹವೆಂದು ತಿಳಿದು ಭೋಗಾಪುರೇಶ ।
ನಿನ್ನ ಪೂಜೆ ಮಾಡದೆ ಉಪೇಕ್ಷಿಸಲು ಭೋಗಾಪುರೇಶ ॥ ೩೪ ॥

ಆಗ ಶಾಕವ್ರತವಿದ್ದು ತೆಂಗನೊಡೆಯುವುದ ನೋಡಿ ಭೋಗಾಪುರೇಶ ।
ಹೇಗೆ ಒಡೆಯುವಿರಿ ಎಂದರ್ಚಕಗೆ ಕೇಳಲು ಭೋಗಾಪುರೇಶ ॥ ೩೫ ॥

ಬುದ್ಧಿ ಮೊದಲಿಂದಲೂ ಈ ಸಂಪ್ರದಾಯವಿದೆಯೆನಲು ಭೋಗಾಪುರೇಶ ।
ಕ್ರುದ್ಧರಾಗಿ ಯತಿಗಳು ಅರ್ಚಕಗೆ ಬಹಿಷ್ಕಾರ ಹಾಕಲು ಭೋಗಾಪುರೇಶ ॥ ೩೬ ॥

ಭೋಜನೋತ್ತರ ರಾತ್ರಿ ಯತಿಗಳು ಮಲಗಿರಲು ನಿನ್ನ ಭೋಗಾಪುರೇಶ ।
ಪೂಜೆ ಮಾಡಿಲ್ಲವೆಂದು ಯತಿಗಳಿಗೆ ಗದಾಪ್ರಹಾರ ಮಾಡಿದಿ ಭೋಗಾಪುರೇಶ ॥ ೩೭ ॥

ಆಗ ಯತಿಗಳಿಗೆ ಕ್ಷೇತ್ರಮಹಿಮೆ ತಿಳಿಯೇ ಭೋಗಾಪುರೇಶ ।
ಹೋಗಿ ಅರ್ಚಕಗೆ ಕರೆಯೆಂದರು ಶಿಷ್ಯರಿಗೆ ಭೋಗಾಪುರೇಶ ॥ ೩೮ ॥

ಬರಲು ಅರ್ಚಕ ಬಹಿಷ್ಕಾರ ತೆಗೆದು ಸನ್ಮಾನಿಸಿದರು ಭೋಗಾಪುರೇಶ ।
ಪರಮ ಕರುಣಾಳೋ ನಿನ್ನಿಂದಲೇ ಸಂದುದೆಂದರು ಭೋಗಾಪುರೇಶ ॥ ೩೯ ॥

ಸತ್ಯಪರಾಯಣರು ನಿನ್ನ ಸ್ತೋತ್ರಗೈದು ಕೊಂಡಾಡೆ ಭೋಗಾಪುರೇಶ ।
ಉತ್ತಮರನೆ ಪರೀಕ್ಷಿಸಿದ ನಿನ್ನ ಪರಿಗೆ ನಮೋ ಭೋಗಾಪುರೇಶ ॥ ೪೦ ॥

ಕನಿಷ್ಠ ಆರು ಸಾವಿರ ವರ್ಷಗಳ ಹಿಂದೆ ಭೋಗಾಪುರೇಶ ।
ಜನಮೇಜಯಾಖ್ಯ ರಾಜ ಸ್ಥಾಪಿಸಿದ ನಿನ್ನ ಇಲ್ಲಿ ಭೋಗಾಪುರೇಶ ॥ ೪೧ ॥

ಆತ ಕರೆಸಿದನು ಸಪ್ತಋಷಿಗಳ ಭಕ್ತಿಲಿ ಭೋಗಾಪುರೇಶ ।
ಆತನ ವಿನಂತಿಯ ಮೇರೆಗೆ ಬಂದರಾ ತಪೋಧನರು ಭೋಗಾಪುರೇಶ ॥ ೪೨ ॥

ವಿಧ್ಯುಕ್ತವಾಗಿ ವೇದಮಂತ್ರಗಳಿಂದ ನಿನ್ನ ಭೋಗಾಪುರೇಶ ।
ವಿದ್ಯುತ್ಕೋಟಿಸಂಕಾಶನೆ ಪ್ರತಿಷ್ಠಾಪಿಸಿದರು ಭೋಗಾಪುರೇಶ ॥ ೪೩ ॥

ವೀರಾಪುರದ ಭಕ್ತ ಸ್ವಾಮಿರಾವ ಎಂಬುವರು ಭೋಗಾಪುರೇಶ ।
ವೀರಾವೇಶದಿ ನಿನ್ನ ಮುಟ್ಟಬೇಕೆಂದು ಬರೆ ಭೋಗಾಪುರೇಶ ॥ ೪೪ ॥

ಅರ್ಚಕರು ಬೇಡವೆಂದು ಅವರನ್ನು ತಡೆಯಲು ಭೋಗಾಪುರೇಶ ।
ಬಿಚ್ಚಿಕೊಡಿ ನಾನು ಕೊಟ್ಟ ನಾಮಗಳ ಎಂದರು ಭೋಗಾಪುರೇಶ ॥ ೪೫ ॥

ಕೊಡಲು ರಜತ ದ್ವಾದಶ ನಾಮಗಳ ಕೊಂಡುಹೋದರು ಭೋಗಾಪುರೇಶ ।
ಒಡನೆ ಕಾಣಿಸಿತು ಉರಿತೊನ್ನು ದ್ವಾದಶ ನಾಮಗಳಾಗಿ ಭೋಗಾಪುರೇಶ ॥ ೪೬ ॥

ಆಗ ಹಠ ಬಿಟ್ಟು ನಿನಗೆ ಶರಣು ಬರಲು ಭೋಗಾಪುರೇಶ ।
ಬೇಗನೆ ನಾಶಪಡಿಸಿ ಸಲುಹಿದೆಯೋ ಭೋಗಾಪುರೇಶ ॥ ೪೭ ॥

ಶ್ರಾವಣ ಮಾಸದಿ ನಿತ್ಯವೂ ಭೋಜನವಾಗುತ್ತಿರೆ ಭೋಗಾಪುರೇಶ ।
ಆವಾಗ ದಿನದ ತುಪ್ಪ ಸಕಾಲಕ್ಕೆ ಬರದಿರಲು ಭೋಗಾಪುರೇಶ ॥ ೪೮ ॥

ಅಪ್ಪ ರಕ್ಷಿಸು ಮಾನವೆಂದು ತಿಮ್ಮಣ್ಣಾಚಾರ್ಯ ಅರ್ಚಕರು ಭೋಗಾಪುರೇಶ ।
ಒಪ್ಪದಿ ಭಜಿಸುತ ಭಾವಿಯ ನೀರು ತಂದು ಅಭಿಮಂತ್ರಿಸಿ ಭೋಗಾಪುರೇಶ ॥ ೪೯ ॥

ಎಲೆಗೆ ಬಡಿಸಲು ತುಪ್ಪವಾಗಿ ಪರಿಣಮಿಸಿತು ಭೋಗಾಪುರೇಶ ।
ಜಲವಾಗಿ ಮಾಡಿದಿ ತಡವಾಗಿ ಬಂದ ತುಪ್ಪವ ಭೋಗಾಪುರೇಶ ॥ ೫೦ ॥

ತುರುಕರಧಿಕಾರಿ ಮೆಟ್ಟು ಧರಿಸಿ ಗುಡಿಯೊಳಗೆ ಬರಲು ಭೋಗಾಪುರೇಶ ।
ಬರಬೇಡಿ ಮೆಟ್ಟು ಧರಿಸಿ ಎಂದು ಹೇಳಿದರೂ ಕೇಳಲಿಲ್ಲ ಭೋಗಾಪುರೇಶ ॥ ೫೧ ॥

ಭರಭರನೆ ಬರಲು ಉರಿಯು ದೇಹಾದ್ಯಂತ ವ್ಯಾಪಿಸೆ ಭೋಗಾಪುರೇಶ ।
ಹೊರಳಾಡಿ ಮೊರೆ ಇಡಲು ತಕ್ಷಣ ರಕ್ಷಿಸಿದಿ ಭೋಗಾಪುರೇಶ ॥ ೫೨ ॥

ಶ್ರಾವಣ ಮಾಸ ಶುದ್ಧ ದಶಮಿಯಂದು ಸಿದ್ಧಾಪುರ ಗೋಪಾಲರಾಯರು ಭೋಗಾಪುರೇಶ ।
ನೈವೇದ್ಯ ಮಾಡಲು ಪೂಜೆ ಊಟವಾದ ಮೇಲೆ ಬಂದರು ಭೋಗಾಪುರೇಶ ॥ ೫೩ ॥

ಆಗ ಸಮಯ ಹಗಲು ಮೂರನೇ ಪ್ರಹರ ಭೋಗಾಪುರೇಶ ।
ಆಗಬೇಕು ಪಂಚಾಮೃತಾಭಿಷೇಕೆಂದರ್ಚಕರಿಗೆ ಬನ್ನಿ ಎನ್ನಲು ಭೋಗಾಪುರೇಶ ॥ ೫೪ ॥

ಅರ್ಚಕರಿಂದು ಬೇಡವೆಂದೆಷ್ಟು ಹೇಳಿದರೂ ಕೇಳದೇ ಭೋಗಾಪುರೇಶ ।
ಅಚ್ಚರಿ ಪಡುವಂತೆ ನಿನ್ನ ಮೇಲೆ ಹಾಲು ಮೊಸರು ಉಗ್ಗಿದರು ಭೋಗಾಪುರೇಶ ॥ ೫೫ ॥

ಗೋಪಾಲರಾಯರ ಪತ್ನಿ ತಾನೇ ಮಾಡಿದ ಅಡುಗೆಯನ್ನು ಭೋಗಾಪುರೇಶ ।
ಪಾಪಕ್ಕೆ ಹೆದರದೇ ಸಮರ್ಪಿಸಲು ಹೊಸ್ತಿಲ ಬಳಿ ಬರಲು ಭೋಗಾಪುರೇಶ ॥ ೫೬ ॥

ಆವರೆಗೆ ಸುಮ್ಮನಿದ್ದ ನೀನು ಕೋಪಗೊಂಡು ಭೋಗಾಪುರೇಶ ।
ಆ ವನಿತೆಯ ಧೊಪ್ಪನೆ ನೆಲಕ್ಕೆ ಕೆಡುಹಿದಿ ಹಿಂದಕ್ಕೆ ನೂಕಿ ಭೋಗಾಪುರೇಶ ॥ ೫೭ ॥

ಆಗ ಅವರಿಗೆ ದುರ್ಬೋಧ ಮಾಡಿದ ಆಚಾರಿ ಪಲಾಯನ ಗೈದ ಭೋಗಾಪುರೇಶ ।
ಬಾಗಿದರು ನಿನ್ನ ಚರಣಕ್ಕೆ ರಕ್ಷಿಸೆಂದು ಭೋಗಾಪುರೇಶ ॥ ೫೮ ॥

ಸಾತ್ವೀಕ ಭಕ್ತರಿಂದಾದ ತಪ್ಪೆಣಿಸದೆ ಭೋಗಾಪುರೇಶ ।
ಮಸ್ತಕದಿ ವರದ ಹಸ್ತವನಿಟ್ಟು ಕಳುಹಿದಿ ಭೋಗಾಪುರೇಶ ॥ ೫೯ ॥

ಅನನ್ಯ ಭಾವದಿ ಭಜಿಸಿದವರನ್ನು ಉದ್ಧರಿಸುವಿ ಭೋಗಾಪುರೇಶ ।
ಒಣಜಂಭ ತೋರಲು ಬರುವವರ ಸೊಕ್ಕು ಮುರಿಯುವಿ ಭೋಗಾಪುರೇಶ ॥ ೬೦ ॥

ನಡೆಯಲು ಬಾರದ ಪಾಂಡು ಎಂಬ ಲಮಾಣಿ ಹುಡುಗ ನಿನ್ನ ಭೋಗಾಪುರೇಶ ।
ಬಿಡದೆ ಸೇವಿಸಲು ಅವನು ನಡೆಯುವಂತೆ ಮಾಡಿದಿ ಭೋಗಾಪುರೇಶ ॥ ೬೧ ॥

ದೂರದೂರದಿಂದಲಿ ನಿನ್ನ ಸೇವಿಸಲು ಬರುತಿಹರು ಭೋಗಾಪುರೇಶ ।
ಪಾರವಿಲ್ಲವೋ ನಿನ್ನ ಮಹಿಮೆಗೆ ಭೋಗಾಪುರೇಶ ॥ ೬೨ ॥

ದಿಂಡು ಉರುಳಿಕೆ ಹಾಕಿ ಸೇವಿಸುವವರೇಷ್ಟೋ ಜನ ಭೋಗಾಪುರೇಶ ।
ಚಂಡಿಕೆ ಜಾವಳ ವಿವಾಹ ಮಾಡುವರು ನಿನ್ನಲ್ಲಿ ಭೋಗಾಪುರೇಶ ॥ ೬೩ ॥

ನಿನಗೆ ಕೂರ್ಮಾಚಾರ್ಯ ಕರಾರ್ಚಿತನೆಂಬೊ ಬಿರುದುಂಟು ಭೋಗಾಪುರೇಶ ।
ಅನುದಿನವೂ ನಿನ್ನ ಅವರು ಪುಜಿಸುತ್ತ ಬರಲು ಭೋಗಾಪುರೇಶ ॥ ೬೪ ॥

ಕರದಿಂ ಅವರು ನಿನಗೆ ಮಂಗಳಾರುತಿಯ ಮಾಡಲು ಭೋಗಾಪುರೇಶ ।
ಶಿರವನಾನಂದದಿಂದಲ್ಲಾಡಿಸುತ್ತಿದ್ದಿಯಂತೆ ಭೋಗಾಪುರೇಶ ॥ ೬೫ ॥

ಭಕ್ತಿಯಿಂದಲಿ ನಿನ್ನ ಅಂಘಾರ ಹಚ್ಚಿ ಸೇವಿಸೆ ಭೋಗಾಪುರೇಶ ।
ಮೆತ್ತಿದ ರೋಗವು ತಕ್ಷಣ ನಾಶವಾಗುವುದು ಭೋಗಾಪುರೇಶ ॥ ೬೬ ॥

ಅಭಿಮಂತ್ರಿಸಿದ ಪಾದೋದಕ ಪ್ರೋಕ್ಷಿಸಿಕೊಳ್ಳಲು ಭೋಗಾಪುರೇಶ ।
ಅಭಿವೃದ್ಧಿಯಾಗುವುದು ಆಯುಷ್ಯ ನಿಸ್ಸಂದೇಹವಾಗಿ ಭೋಗಾಪುರೇಶ ॥ ೬೭ ॥

ಅಂಧಕರು ಬಂದು ನಿನ್ನ ಸೇವಿಸಲು ಭೋಗಾಪುರೇಶ ।
ಚೆಂದದಿ ಅವರಿಗೆ ದೃಷ್ಟಿಯನ್ನಿತ್ತು ರಕ್ಷಿಪೆ ಭೋಗಾಪುರೇಶ ॥ ೬೮ ॥

ಕಾಲಿಲ್ಲದವರು ನಿನ್ನ ನಿರುತ ಭಜಿಸಲು ಭೋಗಾಪುರೇಶ ।
ಬಾಲಾರ್ಕಾಭನೆ ನೀನು ಅವರು ನಡೆವಂತೆ ಮಾಡುವಿ ಭೋಗಾಪುರೇಶ ॥ ೬೯ ॥

ಮೂಕರು ಬಂದು ನಿನ್ನ ಭಜಿಸಲನವರತ ಭೋಗಾಪುರೇಶ ।
ವಾಕುದಯ ಪಾಲಿಸುವಿ ಅವರಿಗೆ ದಯದಿ ಭೋಗಾಪುರೇಶ ॥ ೭೦ ॥

ವಂಧ್ಯಾ ಸ್ತ್ರೀಯರು ಒಂದೇ ಮನದಿ ಭಜಿಸಲು ಭೋಗಾಪುರೇಶ।
ನಂದದಿ ಅವರ ವಂಧ್ಯತ್ವ ಕಳೆದು ಕಂದರ ಕೊಡುವಿ ಭೋಗಾಪುರೇಶ ॥ ೭೧ ॥

ಕಿವುಡರು ಬಂದು ನಿನ್ನಾರಾಧಿಸೆ ಭಕುತಿಯಿಂದ ಭೋಗಾಪುರೇಶ ।
ಶ್ರವಣ ಶಕ್ತಿಯ ಕೊಟ್ಟು ಉದ್ಧರಿಸುವಿ ಅವರ ಭೋಗಾಪುರೇಶ ॥ ೭೨ ॥

ಇಂದಿಗೂ ನಿನ್ನ ಬಳಿ ಸ್ತ್ರೀಪಾಕವಿಲ್ಲ ಭೋಗಾಪುರೇಶ ।
ಕುಂದು ಬರಬಾರದು ಮಡಿಗೆ ಎಂದೆಂದಿಗೂ ಭೋಗಾಪುರೇಶ ॥ ೭೩ ॥

ಒಂದು ವೇಳೆ ಬಂದಿತೆಂದರೆ ಕುಂದು ಮಡಿಗೆ ಭೋಗಾಪುರೇಶ ।
ಬಂದು ನಿಲ್ಲುವಿ ಶೇಷರೂಪದಿ ಇದು ಸತ್ಯ ಭೋಗಾಪುರೇಶ ॥ ೭೪ ॥

ನೂರೆಂಟು ಸಲ ಭಕ್ತಿಲಿ ಭೋಗಾಪುರೇಶನೆಂದು ಜಪಿಸೆ ಭೋಗಾಪುರೇಶ ।
ದೂರ ಮಾಡುವಿ ಅವರ ಸಕಲ ಭಯಗಳ ಮುಕುಂದನ ದಾಸ ॥ ೭೫ ॥

॥ ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥